ಡ್ರಿಯೋಲಿ ಅವನಿಗೆ ಸಾಂತ್ವನ ಹೇಳಿದ.

ಆದರೂ ಹುಡುಗ ಗೆಲುವಾಗಲಿಲ್ಲ. ಸುಮಾರು ಏಳು ತಿಂಗಳ ಹಿಂದೆ, ಒಬ್ಬನೇ ಕೂತು ಮದ್ಯ ಸೇವಿಸುತ್ತಿದ್ದ ಹುಡುಗ ಡ್ರಿಯೋಲಿಗೆ ರಷ್ಯನ್‌ನಂತೆ ಕಂಡಿದ್ದರಿಂದ, ಅವನು ಅವನ ಎದುರಿಗೆ ಹೋಗಿ ಕುಳಿತುಕೊಂಡ.

"ಮಗಾ, ನೀನು ರಷ್ಯನ್ ನಾ?" ಅವನು ಕೇಳಿದ.

ಹುಡುಗ ಹೌದೆಂಬಂತೆ ತಲೆ ಆಡಿಸಿದ.

"ಎಲ್ಲಿ?"

"ಮಿನಸ್ಕ್"

"ಓಹ್!... ನಾನೂ ಮಿನಸ್ಕ್‌ನವನೇ!!" ಡ್ರಿಯೋಲಿ ಎದ್ದು ಹುಡುಗನನ್ನು ಆಲಂಗಿಸಿದ.

"ಅಂದರೆ ಮಿನಸ್ಕ್‌ಗೆ ಬಲು ಹತ್ತಿರ. ಹನ್ನೆರಡು ಮೈಲಷ್ಟೇ ದೂರ."

"ಎಲ್ಲಿ?"

"ಸ್ಮಿಲೋವಿಚ್"

"ಸ್ಮಿಲೋವಿಚಾ? ನಾನು ಸಣ್ಣವನಿದ್ದಾಗ ಬಹಳಷ್ಟು ಬಾರಿ ಹೋಗಿದ್ದೇನೆ." ಡ್ರಿಯೋಲಿ ಅವನನ್ನು ಮತ್ತೊಮ್ಮೆ ಆಲಂಗಿಸಿದ.

ಸ್ಟುಡಿಯೊ ಮಧ್ಯದಲ್ಲಿ ನಿಂತು ಡ್ರಿಯೋಲಿ ಹುಡುಗನನ್ನು ಮತ್ತೊಮ್ಮೆ ಕಣ್ತುಂಬಾ ನೋಡುತ್ತಾ ಲೋಟದಲ್ಲಿ ಉಳಿದಿದ್ದ ಮದ್ಯವನ್ನು ಪೂರ್ತಿಯಾಗಿ ಗಂಟಲಿಗೆ ಬಗ್ಗಿಸಿದ. ಹುಡುಗನ ವಿಶಾಲವಾದ ಹಣೆ, ಎದ್ದು ಕಾಣುತ್ತಿರುವ ಕೆನ್ನೆಗಳ ಮೇಲಿನ ಮೂಳೆಗಳು, ನೇರ ಕಿವಿಗಳು, ಸಣ್ಣದಾದ ಕಣ್ಣುಗಳು, ತಲೆ ತುಂಬಾ ಕಪ್ಪು ಕೇಶರಾಶಿ ಅವನು 'ಕಾಲ್ಮುಕ್' ಜನಾಂಗದವನು ಎಂಬುದನ್ನು ಸಾರುತ್ತಿತ್ತು. ಅವನ ಕೈಗಳು ಮಾತ್ರ ಪುಟ್ಟದಾಗಿದ್ದು ಬೆರಳುಗಳು ಹೆಣ್ಮಕ್ಕಳಂತೆ ನಾಜೂಕಾಗಿದ್ದವು.

"ನನಗೆ ಇನ್ನೂ ಸ್ವಲ್ಪ ಮದ್ಯ ಬೇಕು. ನಾವು ಸಂಭ್ರಮ ಆಚರಿಸುವುದಿದ್ದರೆ ಪೂರ್ತಿಯಾಗಿ ಆಚರಿಸೋಣ." ಹುಡುಗ ಹೇಳಿದ.

ಡ್ರಿಯೋಲಿ ಮದ್ಯ ಸುರುವತೊಡಗಿದ. ಬಳಿಕ ಕುರ್ಚಿಯ ಮೇಲೆ ಕುಳಿತುಕೊಂಡ. ಹುಡುಗ ಅವನ ಮಡದಿಯ ಜತೆ ಮುರುಕಲು ಸೋಫಾದ ಮೇಲೆ ಕುಳಿತುಕೊಂಡ. ಅವರ ಮುಂದೆ ನೆಲದ ಮೇಲೆ ಮತ್ತೂ ಮೂರು ದ್ರಾಕ್ಷಾಮದ್ಯದ ಬಾಟಲುಗಳಿದ್ದವು.

"ಇಂದಿನ ಸಂಜೆ ನನ್ನ ಪಾಲಿಗಿರಲಿ. ಎಷ್ಟೇ ಬಾಟಲುಗಳು ಖರ್ಚಾದರೂ ಪರವಾಗಿಲ್ಲ! ಇವತ್ತಿನ ಮಟ್ಟಿಗೆ ನಾನು ಶ್ರೀಮಂತ! ನಾನು ಮತ್ತೊಮ್ಮೆ ಹೊರಗೆ ಹೋಗುತ್ತಿದ್ದೇನೆ. ಯಾರಿಗೆ ಎಷ್ಟು ಬಾಟಲು ಬೇಕು ಈಗಲೇ ಹೇಳಿ." ಡ್ರಿಯೋಲಿ ಉತ್ಸಾಹದ ಉತ್ತುಂಗದಲ್ಲಿದ್ದ.

"ಆರು, ಆರು!! ಎಲ್ಲರಿಗೂ ಎರಡೆರಡು" ಹುಡುಗ ಹೇಳಿದ.

"ಸರಿ. ನಾನು ಈಗಲೇ ಹೊರಟೆ."

ಡ್ರಿಯೋಲಿ ಹೋಗಿ ಮದ್ಯದ ಬಾಟಲುಗಳನ್ನು ಹೊತ್ತುಕೊಂಡು ಬಂದ. ಎಲ್ಲಾ ಕೆಲಸಗಳನ್ನು ಬದಿಗಿಟ್ಟು ಅವರು ಪಾನಗೋಷ್ಠಿಯನ್ನು ಆರಂಭಿಸಿದರು.

"ಇಂತಹ ಸಂಭ್ರಮ ಆಚರಿಸುವುದು ಶ್ರೀಮಂತರಷ್ಟೇ... ಏನಂತಿರಾ?" ಡ್ರಿಯೋಲಿ ಕೇಳಿದ.

"ಖಂಡಿತ, ಖಂಡಿತ!" ಎಂದು ಹುಡುಗ ತನ್ನ ಪಕ್ಕದಲ್ಲಿ ಕುಳಿತಿದ್ದ ಡ್ರಿಯೋಲಿಯ ಮಡದಿಯ ಕಡೆಗೆ ತಿರುಗಿ, "ಏನಂತೀಯಾ ಜೋಸಿ? ಡ್ರಿಯೋಲಿಯನ್ನು ಬಿಟ್ಟು ನನ್ನನ್ನು ಮದುವೆಯಾಗುತ್ತೀಯಾ, ಹೇಳು?'' ಎಂದ.

"ಖಂಡಿತ ಇಲ್ಲ!"